# ಹತ್ತು ವರ್ಷಗಳಲ್ಲಿ 60 ಸಾವಿರ ಮಂದಿ ನಾಪತ್ತೆ!



## ಮೆಕ್ಸಿಕೊದಲ್ಲಿ ಅಷ್ಟೊಂದು ಜನ ಎಲ್ಲಿಗೆ ಹೋದರು?

**ಅಪರಾಧಿಗಳ ಬಿಗಿ ನಿಯಂತ್ರಣದಲ್ಲಿ ನಲುಗಿರುವ ಮೆಕ್ಸಿಕೊದಲ್ಲಿ ಕೊಲೆ, ಅಪಹರಣಗಳು ವ್ಯಾಪಕವಾಗಿವೆ. ಮಕ್ಕಳನ್ನು ಕಳೆದುಕೊಂಡವರ ನಿಟ್ಟುಸಿರಿನ ಬಿಸಿಗೆ ಅಲ್ಲಿನ ಸರ್ಕಾರಿ ವ್ಯವಸ್ಥೆಯನ್ನು ಸರಿಪಡಿಸುವ ಶಕ್ತಿಯಿದೆಯೇ?**

■ ಡಿ.ಎಂ. ಘನಶ್ಯಾಮ

ಜಗತ್ತನ್ನೇ ಸರಿಮಾಡುತ್ತೇನೆಂದು ಹೂಂಕರಿಸುವ ಅಮೆರಿಕದ ನೆರೆ ದೇಶ ಮೆಕ್ಸಿಕೊದ ರಾಜ್ಯವೊಂದರ ರಾಜಧಾನಿ ಗ್ವಾಡಲಜರಾ. ಸುಮಾರು 15 ಲಕ್ಷ ಜನಸಂಖ್ಯೆಯ ಗ್ವಾಡಲಜರಾದ ಹೊರವಲಯದಲ್ಲಿದೆ ಲಾ ಎಸ್ಪೆನ್ಸಿಯಾ ಉಪನಗರ. ಈಚೆಗೆ ಈ ಉಪನಗರದ ಬಹುತೇಕ ಮನೆಗಳ ಮುಂದೆ ‘ಮನೆ ಮಾರಾಟಕ್ಕಿದೆ’ ಫಲಕ ತೂಗಿಬಿತ್ತು. ಒಮ್ಮೆಲೆ ನೂರಾರು ಮನೆಗಳು ಮಾರಾಟಕ್ಕೆ ಬಂದದ್ದೇಕೆ?

ಈ ಪ್ರಶ್ನೆಗೆ ಉತ್ತರ ಹುಡುಕಲೆಂದು ಇಂಟರ್ನೆಟ್ ಸೋಸುತ್ತಾ ಕುಳಿತಾಗ ಅಪಹರಣಗಳು, ಮಾನವ ಕಳ್ಳಸಾಗಣೆ, ಮಾದಕ ದ್ರವ್ಯ ಮಾಫಿಯಾ, ಕೊಲೆಗಳು, ಯಾರದೋ ಮನೆಯಂಗಳದಲ್ಲಿ ಧುತ್ತೆಂದು ಕಂಡುಬರುವ ಸಾಮೂಹಿಕ ಸಮಾಧಿಗಳು ಹೀಗೆ ಮೆಕ್ಸಿಕೊ ದೇಶದ ಮತ್ತೊಂದು ಮಗ್ಗುಲು ಪರಿಚಯವಾಯಿತು.

ಇದೆಲ್ಲಾ ಶುರುವಾಗಿದ್ದು 2019ರ ಮೇ ತಿಂಗಳಲ್ಲಿ. ಮುಖ್ಯರಸ್ತೆಯ ಬದಿಯಲ್ಲಿದ್ದ ಮನೆಯೊಂದರಲ್ಲಿ ಕೊಳೆತ ಶವವೊಂದು ಪೊಲೀಸರಿಗೆ ಸಿಕ್ಕಿತ್ತು. ಅದಕ್ಕೆ ಒಂದು ತಿಂಗಳು ಮೊದಲು ಅಂದರೆ ಜೂನ್ ತಿಂಗಳಲ್ಲಿ, ಡ್ರಗ್ಸ್ ಮಾಫಿಯಾದವರ ಹಿಡಿತದಿಂದ ತಪ್ಪಿಸಿಕೊಂಡಿದ್ದ ಅದೃಷ್ಟವಂತನೊಬ್ಬ ಪೊಲೀಸರ ಬಳಿಗೆ ಓಡಿಹೋಗಿ, ತನ್ನನ್ನು ಕೂಡಿಹಾಕಿದ್ದ ಮನೆಯ ಬಗ್ಗೆ ಮಾಹಿತಿ ನೀಡಿದ್ದ. ಪೊಲೀಸರು ಆ ಮನೆಯನ್ನು ಪ್ರವೇಶಿಸುವ ಹೊತ್ತಿಗೆ ಅಲ್ಲಿದ್ದ ಜೀವಂತ ದೇಹಗಳು ನಾಪತ್ತೆಯಾಗಿದ್ದವು. ಆದರೆ ಒಂದು ದೇಹವಿಲ್ಲದ ರುಂಡ ಮತ್ತು ಮೂರು ರುಂಡವಿಲ್ಲದ ಮುಂಡಗಳು ಪೊಲೀಸರನ್ನು ಕಾಯುತ್ತಿದ್ದವು.

ಈ ಸುದ್ದಿ ಬಹಿರಂಗವಾದ ನಂತರ ದೇಶದ ವಿವಿಧೆಡೆಗಳಿಂದ ತಮ್ಮ ಆಪ್ತರನ್ನು ಕಳೆದುಕೊಂಡವರು ಗ್ವಾಡಲಜರಾ ನಗರಕ್ಕೆ ಧಾವಿಸಿ, ಮನೆಯಂಗಳಗಳ ಕಾಂಕ್ರೀಟ್‌ಗಳಡಿ ಇರಬಹುದಾದ ಶವಗಳಿಗೆ ಹುಡುಕಾಟ ಆರಂಭಿಸಿದರು. ಜನರೇ ಆರಂಭಿಸಿದ ಈ ಅಭಿಯಾನದಲ್ಲಿ 12ಕ್ಕೂ ಹೆಚ್ಚು ದೇಹಗಳನ್ನು ಹೂಳಲಾಗಿದ್ದ, 15ಕ್ಕೂ ಹೆಚ್ಚು ಸಾಮೂಹಿಕ ಸಮಾಧಿಗಳು ಪತ್ತೆಯಾದವು.

ಗ್ವಾಡಲಜರಾ ನಗರದಲ್ಲಿ ‘ಮನೆ ಮಾರಾಟಕ್ಕಿದೆ’ ಫಲಕಗಳು ಒಮ್ಮೆಲೆ ಅಷ್ಟು ದೊಡ್ಡ ಪ್ರಮಾಣದಲ್ಲಿ ತೂಗಿಬೀಳಲು ಹೀಗೆ ಮನೆಯಂಗಳಗಳಲ್ಲಿ ಪತ್ತೆಯಾದ ಸಮಾಧಿಗಳೇ ಕಾರಣ.

ಇದು ಕೇವಲ ಗ್ವಾಡಲಜರಾ ನಗರವೊಂದರ ಸಮಸ್ಯೆಯಲ್ಲ. ಇಡೀ ಮೆಕ್ಸಿಕೊ ದೇಶವನ್ನು ಬಾಧಿಸುತ್ತಿರುವ ಸಮಸ್ಯೆಯಿದು. ‘ಕಳೆದ ಒಂದು ದಶಕದಲ್ಲಿ ಸುಮಾರು 60 ಸಾವಿರ ಮಂದಿ ನಾಪತ್ತೆಯಾಗಿದ್ದಾರೆ’ ಎಂದು ಜ.6ರಂದು ಮೆಕ್ಸಿಕೊ ಸರ್ಕಾರವೇ ಅಧಿಕೃತವಾಗಿ ಒಪ್ಪಿಕೊಂಡಿತ್ತು. ಕೆಲಸಕ್ಕೆಂದು ಹೋದ ಮಗಳು, ಆಸ್ಪತ್ರೆಗೆಂದು ಹೋದ ವೈದ್ಯ, ಡ್ಯೂಟಿ ಮೇಲೆ ಸ್ಟೇಷನ್‌ನಿಂದ ಹೊರಗೆ ಬಂದ ಪೊಲೀಸ್ ಹೀಗೆ ಯಾರೂ ಸೇಫ್ ಅಲ್ಲ, ಮನೆಮುಟ್ಟುತ್ತಾರೆಂಬ ಭರವಸೆ ಇಟ್ಟುಕೊಳ್ಳುವಂತಿಲ್ಲ ಎನ್ನುವ ಭಾವ ಅಲ್ಲಿನ ಜನರಲ್ಲಿ ಮೂಡಿದೆ.

‘ನನ್ನ ಮಗ ಕೊಲೆಯಾದ ಎನ್ನುವುದಕ್ಕಿಂತಲೂ ನಾಪತ್ತೆಯಾದ ಎನ್ನುವುದೇ ಹೆಚ್ಚು ಬಾಧೆ’ ಎನ್ನುವ ಸ್ಥಿತಿಗೆ ಅಲ್ಲಿನ ತಾಯಂದಿರು ಮುಟ್ಟಿದ್ದಾರೆ.

ಹೆತ್ತಕರುಳು ಇಂಥ ನಿಲುವಿಗೆ ಬರಲು ಏನು ಕಾರಣ ಇರಬಹುದು ಎನ್ನುವುದಕ್ಕೆ ಒಕ್ಟಾವಿಯೊ ಕಾಟೆರೊ ಅವರ ಮಾತುಗಳು ಉತ್ತರ ಹೇಳುತ್ತವೆ. ಈ ಕಾಟೆರೊ ಎಂಬಾತ ಅಪರಿಚಿತ ಶವಗಳ ಗುರುತು ಪತ್ತೆಗೆ ಸಹಕರಿಸುವ ವಿಧಿವಿಜ್ಞಾನ ಕೇಂದ್ರದ ಮಾಜಿ ನಿರ್ದೇಶಕ. ಅವರ ಮಗಳು ನಾಲ್ಕು ವರ್ಷಗಳ ಹಿಂದೆ ನಾಪತ್ತೆಯಾದಳು.



ಮೆಕ್ಸಿಕೊ ಅಧ್ಯಕ್ಷ ಮಾನ್ಯುಯಲ್ ಲೋಪೆಜ್ ಅಬ್ರಾಡೊರ್

‘ಜನರನ್ನು ಅಪಹರಿಸಿ, ಅವರ ಆಪ್ತರಿಗೆ ದಿನದಿನ ಚಿತ್ರಹಿಂಸೆ ಅನುಭವಿಸುವಂತೆ ಮಾಡುವುದು ಕ್ರೌರ್ಯದ ಪರಮಾವಧಿ. ಅವರು ಎಲ್ಲಿದ್ದಾರೋ? ಹೇಗಿದ್ದಾರೋ? ಎಂಬ ಆತಂಕದಲ್ಲಿಯೇ ನಮ್ಮ ದಿನಗಳು ಮುಗಿಯುತ್ತಿವೆ. ಎಲ್ಲಿ ಯಾವುದೇ ಅಪರಿಚಿತ ಶವ, ಸಾಮೂಹಿಕ ಸಮಾಧಿಗಳು ಪತ್ತೆಯಾದರೂ ಅಲ್ಲಿಗೆ ಓಡಿ, ನನ್ನ ಮಗಳು ಇದ್ದಾಳೆಯೇ ಎಂದು ಹುಡುಕುತ್ತೇನೆ. ನನ್ನ ಕೆಲಸ, ಉಳಿತಾಯದ ಹಣ ಎಲ್ಲವೂ ಮಗಳ ಹುಡುಕಾಟಕ್ಕೆ ಕರಗಿಹೋಯ್ತು. ಇನ್ನು ನನ್ನ ಜೀವವೊಂದು ಉಳಿದಿದೆ’ ಎಂದು ನಿಟ್ಟುಸಿರು ಬಿಡುತ್ತಾರೆ ಈ ತಂದೆ.

ಮಾದಕ ದ್ರವ್ಯ ಸಾಗಣೆ ಮತ್ತು ಮಾರಾಟ ಮಾಫಿಯಾ ಮೆಕ್ಸಿಕೊದಲ್ಲಿ ಪ್ರಬಲ ಅಪರಾಧ ಕೂಟಗಳ ಹಿಡಿತದಲ್ಲಿದೆ. ಮೆಕ್ಸಿಕೊದ ಅತ್ಯಂತ ಶಕ್ತಿಶಾಲಿ ಅಪರಾಧ ಕೂಟ ಎಂದು ಸರ್ಕಾರ ಪರಿಗಣಿಸಿರುವ ಜೆಸಿಕಾ ನ್ಯೂ ಜನರೇಷನ್ ಕಾರ್ಟೆಲ್ (ಸಿಜೆಎನ್‌ಜಿ) ಮತ್ತು ಅದೇ ಗುಂಪಿನಿಂದ 2017ರಲ್ಲಿ ಒಡೆದು ಹೊರಬಂದ ನ್ಯೂವಾ ಪ್ಲಾಜಾ ಪರಸ್ಪರ ಮೇಲುಗೈ ಸಾಧಿಸಲು ಅವಿರತ ಹಿಂಸಾಚಾರದಲ್ಲಿ ತೊಡಗಿವೆ. ಭ್ರಷ್ಟ ಪೊಲೀಸರು ಮತ್ತು ರಾಜಕಾರಣಿಗಳು ತಮಗೆ